ಮೈಸೂರ ಗೆಜೆಟ್ಟ.

ನಂ. 50 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1890.

ಬೆಂಗಳೂರು, ಶನಿವಾರ, ಡಿಸಂಬರ್ ತಾ|| 20, ಸನ್ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟಿಂಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಸಾಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮರ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇರ್ಷಗಳು—1890ನೇ ಇಸವಿಯ VIನೇ ನಂಬರ್ ರೆಗ್ಯುಲೇರ್ಷ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮರ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 12ನೇ ಡಿಸಂಬರ್ 1890.

ನಂ. 327.—ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಸಂಸ್ಥಾನದ ತಮಾಂ ಪಬ್ಲಿಕ್ ಆಫಿಸುಗಳೂ ಕ್ರಿಸ್‌ಮಸ್ ರಜಾಕ್ಕೋಸ್ಕರ 1890ನೇ ಇಸವಿ ಡಿಸಂಬರ್ 22ನೇ ಮಂಗಳವಾರದಾರಭ್ಯ 1891ನೇ ಇಸವಿ ಜನವರಿ 3ನೇ ಮಂಗಳವಾರ ಪರ್ಯಂತ ಬರಖಾಸ್ತು ಮಾಡಲ್ಪಡತಕ್ಕದ್ದು.

ಜರೂರಿಯಾತ್ ಕೆಲಸ ಚಲಾವಣೆ ಬಗ್ಯಾಗಿ ಇಲಾಖಾ ಮೊಕದ್ದೇಸರರಿಂದ ವಿಚಾರಿಸು ಮಾಡಲ್ಪಡತಕ್ಕದ್ದು.

ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಕಛೇರಿಗಳಿಗಾಗಲಿ ಜವಾಬಂದೀ ಕೆಲಸ ನಡಿಸುತ್ತಿರುವ ಆಫಿಸರರಿಗಾಗಲಿ ಅನ್ವಯಿಸುವದಿಲ್ಲವು.

ತಾರೀಖು 9ನೇ ಡಿಶಂಬರ್ 1890.

ನಂ. 330.—ಮೈಸೂರು ಲೋಕಲ್ ಸರ್ವಿಸ್ ಪರಿಕ್ಷೆಗಳಾದ ರೆವಿನ್ಯೂ, ಸಿವಿಲ್ ವ ಕ್ರಿಮಿನಲ್ ಬಾಬಿನಲ್ಲಿ ತೇರ್ಗಡೆಯಾದವರ ಹೆಸರುಗಳು ಈ ಕೆಳಗೆ ಕಂಡ ಪಟ್ಟಿಯಲ್ಲಿ ಯೋಗ್ಯತಾಕ್ರಮವನುಸರಿಸಿ ನಮೂದ್ಮಾಡಲ್ಪಟ್ಟಿರುತ್ತೆ.

ರೆವಿನ್ಯೂ.

ಕ್ರಮನಂಬರ್.	ಹೆಸರು.	ಹುದ್ದೆ ಹೆಸರು.	ಯಾವ ಭಾಷೆಯಲ್ಲಿ ಪರಿಕ್ಷೆ ಮಾಡಲ್ಪಟ್ಟದ್ದು.
1	ಕೆ. ಜಿ. ಶಾಮಣ್ಣ ..	ಹೊಳೇನರಸೀಪುರದ ಪೊಲೀಸ್ ಇನ್‌ಸ್ಪೆಕ್ಟರು ..	ಇಂಗ್ಲೀಷ್
2	ಎಸ್. ತಿಮ್ಮಕ್ಕಪ್ಪಯ್ಯ ..	ಬೆಂಗಳೂರು ಅಮೃತಮಹಲ್ ಇಲಾಖೆಯ ರೈಟರು ..	ಡಿಟೋ
3	ಬಿ. ಕೃಷ್ಣಯ್ಯಂಗಾರ್ ..	ಮಿಲಿಟರಿ ಸೆಕ್ರಟರಿ ಆಫಿಸ್ 5ನೇ ಕ್ಲರ್ಕ್ ..	ಡಿಟೋ
4	ಬಿ. ಅಳಸಿಂಗರಯ್ಯಂಗಾರ್ ..	ಚಿತ್ರದುರ್ಗದ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫಿಸ್ ಕ್ಲರ್ಕ್ ..	ಡಿಟೋ
5	ಕೆ. ನರಸಿಂಹಯ್ಯಂಗಾರ್ ..	ಕಡೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫಿಸ್ ಡೆಪ್ಯೂಟಿ ಮುನಷಿ	ಡಿಟೋ
6	ಎಸ್. ಸುಬ್ಬರಾಯ ..	ಚಿಕ್ಕಮುಗಳೂರು ಗವರ್ಮೆಂಟ್ ಹೈಸ್ಕೂಲ್ 1ನೇ ಅಸಿಸ್ಟೆಂಟ್ ಮಾಸ್ಟರ್	ಡಿಟೋ
7	ಸಿ. ಭೀಮಯ್ಯ ..	ಚಿತ್ರದುರ್ಗದ ಡೆಪ್ಯೂಟಿ ಕಮ್ಮಿಷನರ್ ಆಫಿಸ್ ಆಕ್ಟಿಂಗ್ 4ನೇ ಕ್ಲರ್ಕ್	ಡಿಟೋ
8	ಕೆ. ಅನಂತಯ್ಯ ..	ಹಾರ್ಸ ಸಬ್ ಡಿವಿಜ್ಞ ಮುನಸೀಫ್ ಕೋರ್ಟು 3ನೇ ಮುನಷಿ.	ಡಿಟೋ
9	ಸಿ. ವೆಂಕಟಸುಬ್ಬಯ್ಯ ..	ಬೆಂಗಳೂರು ಡಿವಿಜ್ಞ ಪಬ್ಲಿಕ್ ವರ್ಕ್ಸ್ ಇಲಾಖೆ ಅಕೌಂಟೆಂಟ್.	ಡಿಟೋ
10	ಬಿ. ಕೇಶವಯ್ಯಂಗಾರ್ ..	ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸ್ ಅಕೌಂಟೆಂಟ್ ..	ಡಿಟೋ
11	ಎ. ಅನಂತರಾಮಯ್ಯಂಗಾರ್.	ಶಿವಮೊಗ್ಗ ಡೆಪ್ಯೂಟಿ ಕಮ್ಮಿಷನರ್ ಆಫಿಸ್ 3ನೇ ಇಂಗ್ಲೀಷ್‌ಕ್ಲರ್ಕ್	ಡಿಟೋ
12	ಡಿ. ಸುಬ್ಬರಾವ್ ..	ಹಿರಿಯೂರ್ ತಾಲ್ಲೂಕು ಹೆಡ್ ಮುನಷಿ ..	ಡಿಟೋ
13	ಎ. ಸುಬ್ಬರಾವ್ ..	ಶಿವಮೊಗ್ಗ ಡಿಸ್ಟ್ರಿಕ್ಟ್ ರೆವಿನ್ಯೂ ಪ್ರೊಬೇಷನರ್ ..	ಡಿಟೋ
14	ಡಿ. ಲಕ್ಷ್ಮಣರಾವ್ ..	ಚಿತ್ರದುರ್ಗದ ಡಿಸ್ಟ್ರಿಕ್ಟ್ ಟ್ರೈಜರಿ ಕ್ಲರ್ಕ್ ವ ರಿಕಾರ್ಡ್‌ಕೀಪರ್ ..	ಡಿಟೋ
15	ಎ. ರಾಮಣ್ಣ ..	ಹಾರ್ಸ ಡಿಸ್ಟ್ರಿಕ್ಟ್ ಪೊಲೀಸ್ 3ನೇ ಮುನಷಿ ..	ಕನ್ನಡ
16	ಟಿ.ಕೃಷ್ಣಯ್ಯಂಗಾರ್ ..	ಶಿವಮೊಗ್ಗ ಫಾರೆಸ್ಟ್ ಕ್ಲರ್ಕ್ ವ ಅಕೌಂಟೆಂಟ್ ..	ಇಂಗ್ಲೀಷ್
17	ಹೆಚ್. ಶೇಷಂಕಯ್ಯ ..	ಹಾರ್ಸ ಡಿಸ್ಟ್ರಿಕ್ಟ್ ಪೊಲೀಸ್ ಇಲಾಖಾ ಹೆಡ್ ಮುನಷಿ ..	ಕನ್ನಡ
18	ಕೆ. ತಿರುನಾರಣಯ್ಯಂಗಾರ್ ..	ಶಿವಮೊಗ್ಗ ಡೆಪ್ಯೂಟಿ ಕಮ್ಮಿಷನರ್ ಆಫಿಸ್ ಸಾಯರ್ ಅಕೌಂಟೆಂಟ್	ಇಂಗ್ಲೀಷ್
19	ಬಿ. ಜಗನ್ನಾಥರಾವ್ ..	ಚಿತ್ರದುರ್ಗದ ಡೆಪ್ಯೂಟಿ ಕಮ್ಮಿಷನರ್ ಆಫಿಸ್ ಡೆಪ್ಯೂಟಿ ಅಕೌಂಟೆಂಟ್	ಡಿಟೋ
20	ಡಿ. ವೆಂಕಟರಮಣಯ್ಯ ..	ಬೆಂಗಳೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ರೆವಿನ್ಯೂ ಅಕೌಂಟೆಂಟ್ ..	ಕನ್ನಡ
21	ಪಿ. ರಂಗರಾವ್ ..	ತುಮಕೂರು ಡೆಪ್ಯೂಟಿ ಕಮ್ಮಿಷನರ್ ಆಫಿಸ್ 3ನೇ ಕ್ಲರ್ಕ್ ..	ಇಂಗ್ಲೀಷ್
22	ಕೃಷ್ಣಾಜಿ ನಾರಾಯಣ ..	ಬೆಂಗಳೂರು ರೆವಿನ್ಯೂ ಸರ್ವೆ ಹೆಡ್ ಕ್ವಾರ್ಟರ್ ಆಫಿಸ್ ಡ್ರಾಫ್ಟ್ಸ್‌ಮ್ಯಾನ್	ಕನ್ನಡ
23	ಬಿ. ಗರುಡಾಚಾರ್ ..	ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೈಜರಿ ಡೆಪ್ಯೂಟಿ ಅಕೌಂಟೆಂಟ್ ..	ಇಂಗ್ಲೀಷ್
24	ಕೃಷ್ಣರಾವ್ ..	ಹಾರ್ಸ ಡೆಪ್ಯೂಟಿ ಕಮ್ಮಿಷನರ್ ಆಫಿಸ್ ಆಕ್ಟಿಂಗ್ ರೆವಿನ್ಯೂ ಹೆಡ್ ಅಕೌಂಟೆಂಟ್	ಕನ್ನಡ

ಸಿವಿಲ್.

1	ಎಸ್. ರಾಮರಾವ್	ಚಿಕ್ಕಮುಗಳೂರು ಹೈಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ..	ಇಂಗ್ಲೀಷ್

ಕ್ರಿಮಿನಲ್.

1	ಬಿ. ವಿ. ಲಕ್ಷ್ಮಣರಾವ್ ..	ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಆಫಿಸ್ ಮ್ಯೂನಿಸಿಪಲ್ ಕ್ಲರ್ಕ್	ಇಂಗ್ಲೀಷ್
2	ಬಿ. ರಾಮಸ್ವಾಮಯ್ಯ ..	ಚಿತ್ರದುರ್ಗ ಡಿಸ್ಟ್ರಿಕ್ಟ್ ಆಫಿಸ್ 4ನೇ ಕ್ಲರ್ಕ್ ಮತ್ತು ಆಕ್ಟಿಂಗ್ ರೆವಿನ್ಯೂ ಹೆಡ್ ಮುನಷಿ ..	ಡಿಟೋ
3	ನೆಂ|| ಬಿ. ರಾಮಸ್ವಾಮಯ್ಯರ್	ಹಾರ್ಸ ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ..	ಡಿಟೋ
4	ಎಂ. ಲಕ್ಷ್ಮಣಾಚಾರ್ ..	ಮಾಗಡಿ ಪೊಲೀಸ್ ಇನ್‌ಸ್ಪೆಕ್ಟರ್ ..	ಡಿಟೋ
5	ಜಿ. ಬಿ. ಚಿನ್ನಸಾಮಿ ..	ಹೊಸದುರ್ಗದ ಹಾಸ್ಪಿಟಲ್ ಅಸಿಸ್ಟೆಂಟ್ ..	ಡಿಟೋ
6	ಟಿ. ಚೊಕ್ಕಣ್ಣ ..	ಮೈಸೂರು ರಿವಿನ್ಯೂ ಪ್ರೊಬೇಷನರ್ ..	ಡಿಟೋ

835

ಸೀನಿಯಾರಿಟಿ ನಂಬರ್.	ಹೆಸರು.	ಹುದ್ದೆ ಹೆಸರು.	ಯಾವ ಭಾಷೆಯಲ್ಲಿಪರೀಕ್ಷೆ ಮಾಡಲ್ಪಟ್ಟಿದ್ದು.
7	ಎಂ. ವೆಂಕಟರಂಗಾಚಾರ್ ..	ಚಿಕ್ಕಮುಗಳೂರು ಹೈಸ್ಕೂಲ್ 2ನೇ ಆಸಿಸ್ಟೆಂಟ್ ಮಾಸ್ಟರ್ ..	ಇಂಗ್ಲೀಷ್.
8	ಎಸ್. ಸುಬ್ಬರಾವ್ ..	ಶಿವಮೊಗ್ಗ ಡಿಸ್ಟ್ರಿಕ್ಟ್ ರೆವಿನ್ಯೂ ಪ್ರೊಬೇಷನರ್ ..	ಡಿಟೋ
9	ಕೆ. ಎಸ್. ವೀರಭದ್ರಯ್ಯ ..	ಚಿತ್ರದುರ್ಗದ ಹೈಸ್ಕೂಲ್ ಸೆಕೆಂಡ್ ಅಸಿಸ್ಟೆಂಟ್ ಮಾಸ್ಟರ್ ..	ಡಿಟೋ
10	ಎಲ್ಲೋ ಶ್ರೀನಿವಾಸರಾವ್ ..	ಬೆಂಗಳೂರಲ್ಲಿನ ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರ ಆಫಿಸ್ ಹೆಡ್ ಕ್ಲರ್ಕ್	ಡಿಟೋ
11	ಸಿ. ವೆಂಕಟಾಚಲಯ್ಯ ..	ಕಡೂರು ತಾಲ್ಲೂಕು ಅಮಲ್ದಾರ್	ಡಿಟೋ
12	ಸಿ. ಶೇಷಗಿರಿರಾವ್ ..	ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫಿಸ್ ಆಕ್ಟಿಂಗ್ ರೆವಿನ್ಯೂ ಹೆಡ್ ಅಕೌಂಟೆಂಟ್	ಡಿಟೋ
13	ಕೃಷ್ಣಾಜಿ ನಾರಾಯರ್ ..	ಬೆಂಗಳೂರು ರೆವಿನ್ಯೂ ಸರ್ವೆ ಹೆಡ್ ಕ್ವಾರ್ಟರ್ ಆಫಿಸ್ ಡ್ರಾಫ್ಟ್ಸ್‌ಮ್ಯಾನ್	ಕನ್ನಡ
14	ಮೆ|| ಆರ್. ಬಿ. ಪ್ಯೂಮರ್ ..	ಮೈಸೂರು ರೆವಿನ್ಯೂ ಪ್ರೊಬೇಷನರ್	ಇಂಗ್ಲೀಷ್
15	ಸಿ. ಕೃಷ್ಣರಾವ್ ..	ಮೂಲೂರು ತಾಲ್ಲೂಕು ಪೊಲೀಸ್ ಇನ್‌ಸ್ಪೆಕ್ಟರ್ ..	ಕನ್ನಡ
16	ಹೆಚ್. ಶ್ರೀನಿವಾಸಯ್ಯಂಗಾರ್ ..	ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಜರಿ ಆಕೌಂಟೆಂಟ್ ..	ಇಂಗ್ಲೀಷ್
17	ಪಿ. ರಂಗರಾವ್ ..	ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಹೆಡ್ ಕ್ಲರ್ಕ್ ..	ಡಿಟೋ
18	ಗುಂಡೆಲಕ್ಷ್ಮ್ಮಕ್ ..	ಬೆಂಗಳೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರ ಆಫಿಸ್ ಹುಜೂರು ಕಾರಕೂ	ಕನ್ನಡ
19	ಎಂ. ಕೇಶವಯ್ಯ ..	ಗೋರಿಬಿದನೂರು ಪೊಲೀಸ್ ಇನ್‌ಸ್ಪೆಕ್ಟರ್	ಇಂಗ್ಲೀಷ್
20	ಡಬ್ಳಿಯು. ಶಾಮರಾವ್ ..	ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಕೆಲಸನೋಡುವ ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರರ್	ಡಿಟೋ
21	ವಿ. ಕೃಷ್ಣಸ್ವಾಮಿಮೊದಲಿಯಾರ್	ದಿವ್ಯಾರವರ ಆಫಿಸ್ ಕ್ಲರ್ಕ್	ಡಿಟೋ

2. ಈ ಕೆಳಗೆ ನಮೂದು ಮಾಡಲ್ಪಟ್ಟಿರುವವರು ಅಕೌಂಟ್ ವ ಫೈನಾನ್ಷಿಯಲ್ ಕೋಡುಗಳು ವಿನಹಾ ರೆವಿನ್ಯೂ ಪರೀಕ್ಷೆಗೆ ನಿಯಮಿಸಲ್ಪಟ್ಟ ಎಲ್ಲಾ ಪಾಠಗಳಲ್ಲಿ ತೇರ್ಗಡೆಯಾಗಿದ್ದಾರೆ. ಇವರು ಸದರೀ ಕೋಡುಗಳಲ್ಲಿ ಪುನಹಾ ಪರೀಕ್ಷೆ ಕೊಡತಕ್ಕದ್ದು.

ಸಿ. ಕೆ. ಕೃಷ್ಣಪ್ಪ ..	ಬೌರಿಂಗ್‌ಪೇಟೆ ಗವರ್ನಮೆಂಟ್ ಸ್ಕೂಲ್ ಇಂಗ್ಲೀಷ್ ಹೆಡಿಮಾಸ್ಟರ್.
ಡಿ. ನಾರಾಯಣರಾವ್ ..	ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸ್ ರಿಜಿಸ್ಟ್ರೇಷ್ ಹೆಡ್ ಕ್ಲರ್ಕ್ ..
ಎಸ್. ರಾಮರಾವ್ ..	ಚಿಕ್ಕಮುಗಳೂರು ಹೈಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ..
ಮಂಕಾಲ್ ಅಹೋಬಲಶಾಸ್ತ್ರಿ ..	ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟರ ಆಫಿಸ್ ಕಾರ್ಕೂ .. ..
ಸಿ. ನಾರಾಯಣರಾವ್ ..	ಹಾರ್ಸ ಡೆಪ್ಯುಟಿ ಕಮ್ಮಿಷನರ ಆಫಿಸ್ ಡೆಪ್ಯುಟಿ ಕ್ಲರ್ಕ್ ..
ಆವತಿ ರಾಮಣ ..	ಮೈಸೂರು ಚೀಫ್ ಕೋರ್ಟಿನ ಅಡ್ವೋಕೇಟ್ ..
ಎಂ. ನಂಜಪ್ಪ ..	ಶ್ರೀರಂಗಪಟ್ಟಣದ ಮುನಸಿಫ್ ಕೋರ್ಟ್ ಡೆಪ್ಯುಟಿ ಕ್ಲರ್ಕ್ ..
ಎಚ್. ಡಿ. ನಾರಾಯಣಪ್ಪ ..	ಹಾರ್ಸ ಡೆಪ್ಯುಟಿ ಕಮ್ಮಿಷನರ ಆಫಿಸ್ ರೆಸಿನ್ಯೂ ಹೆಡ್ ರಿಕಾರ್ಡ್ ಕೀಪರ್ .. .. ..
ವಿ. ಎಚ್. ಗೋಪಾಲರಾವ್ ..	ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಕೆಲಸನೋಡುತ್ತಿರುವ ಡೆಪ್ಯುಟಿ ಅಮಲ್ದಾರ್ .. ..
ಆರ್. ಮೂರ್ತಿರಾವ್ ..	ಮೈಸೂರು ಗವರ್ನಮೆಂಟ್ ಮಿಲಿಟೇರಿ ಸ್ಟೋರ್ಸ್ ಕ್ಲರ್ಕ್ ..
ಬಿ. ತಿರುಮಲಾಚಾರ್	ಬೌರಿಂಗ್‌ಪೇಟೆ ತಾಲ್ಲೂಕು ಶರಸ್ತೇದಾರ್ ..

3. ಪರೀಕ್ಷೆಯಲಿ ತೇರ್ಗಡೆಯಾಗದೆ ಇರುವವರ ಜನರಲ್ ನಂಬರು ಮತ್ತು ಅವರು ಯಾವ ಪಾಠಗಳಲ್ಲಿ ತೇರ್ಗಡೆಯಾಗಲಿಲ್ಲವೆಂಬುವುದು ಸುದಾ ಈ ಕೆಳಗೆ ಬರುವ ಪಟ್ಟಿಯಲ್ಲಿ ತೋರಿಸಲ್ಪಟ್ಟಿರುತ್ತೆ.

ರೆವಿನ್ಯೂ.

ಜನರಲ್ ನಂಬರ್.	ತೇರ್ಗಡೆಯಾಗದ ಪಾಠಗಳು.
19	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್, ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.
34	ಡಿಟೋ ಡಿಟೋ
51	ಎಲ್ಲಾ ಪಾಠಗಳು
52	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್.
53	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್, ಫಾರೆಸ್ಟ್ ರೂಲ್ಸ್; ಕ್ಯಾಟಲ್ ಟ್ರೆಸ್‌ಪಸ್, ಓಪಿಯಂ ಮತ್ತು ಎಕ್ಸೈಸ್ ಆಕ್ಟ್ಸುಗಳು,—ರಿಜಿಸ್ಟ್ರೇಷ್, ಆಕ್ಟ್; ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.

836

ರೆವಿನ್ಯೂ.

ಜನರಲ್ ನಂಬರ್.	ತೀರ್ಮಾನವಾಗದ ಪಾಠಗಳು.
55	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್; ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.
56	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್, ಕ್ಯಾಟಲ್ ಟ್ರೆಸ್‌ಪಸ್, ಓಪಿಯಂ ಮತ್ತು ಎಕ್ಸೈಸ್ ಆಕ್ಟುಗಳು; ರಿಜಿಸ್ಟ್ರೇಷನ್ ಆಕ್ಟು; ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.
66	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್; ಸ್ಟ್ಯಾಂಪ್ ಮತ್ತು ಕೋರ್ಟು ಫೀಸ್ ಆಕ್ಟುಗಳು, ರಿಜಿಸ್ಟ್ರೇಷನ್ ಆಕ್ಟು ಮತ್ತು ಅಕೌಂಟ್ ವ ಫೈನಾನ್ಷಿಯಲ್ ಕೋಡುಗಳು.
68	ಕ್ಯಾಟಲ್ ಟ್ರೆಸ್‌ಪಸ್, ಓಪಿಯಂ ಮತ್ತು ಎಕ್ಸೈಸ್ ಆಕ್ಟುಗಳು ; ಮತ್ತು ರಿಜಿಸ್ಟ್ರೇಷನ್ ಆಕ್ಟು.
71	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್; ಕ್ಯಾಟಲ್ ಟ್ರೆಸ್‌ಪಸ್, ಓಪಿಯಂ ಮತ್ತು ಎಕ್ಸೈಸ್ ಆಕ್ಟುಗಳು ; ರಿಜಿಸ್ಟ್ರೇಷನ್ ಆಕ್ಟು; ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.
81	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್; ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು; ಮತ್ತು ರಿಜಿಸ್ಟ್ರೇಷನ್ ಆಕ್ಟು.
86	ಡಿಟೋ ಡಿಟೋ ಡಿಟೋ
118	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್; ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.
119	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್; ಸ್ಟ್ಯಾಂಪ್ ಮತ್ತು ಕೋರ್ಟು ಫೀಸ್ ಆಕ್ಟುಗಳು; ಕ್ಯಾಟಲ್ ಟ್ರೆಸ್‌ಪಸ್ ಎಕ್ಸೈಸ್ ಮತ್ತು ಓಪಿಯಂ ಆಕ್ಟುಗಳು ; ರಿಜಿಸ್ಟ್ರೇಷನ್ ಆಕ್ಟು, ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.
127	ಕ್ಯಾಟಲ್ ಟ್ರೆಸ್‌ಪಸ್, ಎಕ್ಸೈಸ್ ಮತ್ತು ಓಪಿಯಂ ಆಕ್ಟುಗಳು ; ರಿಜಿಸ್ಟ್ರೇಷನ್ ಆಕ್ಟು, ಅಕೌಂಟ್ ಮತ್ತು ಫೈನಾನ್ಷಿಯಲ್ ಕೋಡುಗಳು.
117	ರೆವಿನ್ಯೂ ಮತ್ತು ಸರ್ವೆ ಮಾನ್ಯುಯಲ್.

ಕ್ರಿಮಿನಲ್.

ಜನರಲ್ ನಂಬರ್.	ತೀರ್ಮಾನವಾಗದ ಪಾಠಗಳು.
8	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್; ಲಾ ಆಫ್ ಎವಿಡೆನ್ಸ್.
13	ಇಂಡಿಯನ್ ಪೆನಲ್‌ಕೋಡ್; ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್.
14	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್.
33	ಇಂಡಿಯನ್ ಪೆನಲ್‌ಕೋಡ್.
41	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್.
43	ಇಂಡಿಯನ್ ಪೆನಲ್‌ಕೋಡ್; ಲಾ ಆಫ್ ಎವಿಡೆನ್ಸ್.
45	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್.
62	ಲಾ ಆಫ್ ಎವಿಡೆನ್ಸ್; ಪೊಲೀಸ್ ರೂಲ್ಸ್.
60	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್; ಲಾ ಆಫ್ ಎವಿಡೆನ್ಸ್.
72	ಇಂಡಿಯನ್ ಪೆನಲ್‌ಕೋಡ್; ಲಾ ಆಫ್ ಎವಿಡೆನ್ಸ್.
75	ಎಲ್ಲಾ ಪಾಠಗಳು.
87	ಕ್ರಿಮಿನಲ್ ಪ್ರೊಸಿಜ್ಯೂರ್; ಲಾ ಆಫ್ ಎವಿಡೆನ್ಸ್.
88	ಇಂಡಿಯನ್ ಪೆನಲ್‌ಕೋಡ್; ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್.
90	ಲಾ ಆಫ್ ಎವಿಡೆನ್ಸ್.
91	ಇಂಡಿಯನ್‌ಪೆನಲ್‌ಕೋಡ್; ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್; ಲಾ ಆಫ್ ಎವಿಡೆನ್ಸ್.
98	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್.
109	ಲಾ ಆಫ್ ಎವಿಡೆನ್ಸ್.
120	ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ್.
121	ಇಂಡಿಯನ್ ಪೆನಲ್‌ಕೋಡ್; ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್; ಲಾ ಆಫ್ ಎವಿಡೆನ್ಸ್.
122	ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ್.
123	ಡಿಟೋ
124	ಡಿಟೋ ಪೊಲೀಸ್ ರೂಲ್ಸ್

ತಾರೀಖು 10ನೇ ಡಿಸಂಬರ್ 1890.

ನಂ. 325.—ಇಂಡಿಯ ದೇಶದಲ್ಲಿ ತಯಾರಾದ ಇದರಡಿ ಕಂಡ ತೇದಾದುಗಳುಳ್ಳ ಕಾಗದಗಳನ್ನು ಸರಬರಾಯಿ ಮಾಡುವ ಬಗ್ಯಾಗಿ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಮೈಸೂರು ದಿವಾನ್ ರವರ ಚೀಫ್ ಸೆಕ್ರಟೆರಿಯವರಿಂದ ಬೆಂಗಳೂರು ಮೊಕ್ಕಾಂ ಅವರ ಆಫಿಸಿನಲ್ಲಿ 1891ನೇ ಇಸವಿ ಜನವರಿ 19ನೇ ಮಧ್ಯಾನ್ಹದ 11 ಘಂಟೆ ವರಿವಿಗೆ ಅಂಗೀಕರಿಸಲ್ಪಡುತ್ತೆ.

ಕಾಗದ್ದ ವಿವರಣೆ.	ಕಾಗದ್ದ ಅಳತೆ.	ಬೇಕಾಗಿರುವ ರೀಮುಗಳ ಸಂಖ್ಯೆ.	ರೀಂ 1ಕ್ಕೆ ಒಪ್ಪುವ ದರ.
42 ಪೌಂ ಬಾಬತ್ತು ಗುಣವಾದ ಬ್ರೌನ್ ಕಾಟ್ರಿಡಿಜ್ ಕಾಗದ ..	$22\frac{1}{2}'' \times 29''$	15	
38 ಪೌನಿನ ಸಾಧಾರಣವಾದ ಡಿಟೋ ..	$22\frac{1}{2}'' \times 29''$	250	
31 ಪೌನಿನ ಬಾದಾಮಿ ಡಬ್ಬಲ್ ರಾಯಲ್ ಕಾಗದ ..	26 $''\times 40''$	100	
16 ಪೌನಿನ ಬಾದಾಮಿ ಡಿಮ್ಮೈ ಕಾಗದ ..	18 $''\times 22''$	200	
14 ಪೌನಿನ ಡಿಟೋ ಡಿಟೋ ..	18 $''\times 22''$	1,700	
18 ಪೌನಿನ ಬಿಳೀ ಪ್ರಿಂಟಿಂಗ್ ಡಿಮ್ಮೈ ಕಾಗದ ..	18 $''\times 22''$	500	
16 ಪೌನಿನ ಡಿಟೋ ಡಿಟೋ ..	18 $''\times 22''$	500	
12 ಪೌನಿನ ಬಿಳೀ ಪ್ರಿಂಟಿಂಗ್ ಫುಲ್‌ಸ್ಕ್ಯಾಪ್ ಕಾಗದ ..	17 $''\times 13\frac{1}{2}'$	1,700	
28 ಪೌನಿನ ಡಿಟೋ ಡಬ್ಬಲ್ ಡಿಟೋ ..	17 $''\times 27''$	30	

2. ದರಖಾಸ್ತು ಮೇಲ್ಕಂಡ ನಮೂನೆಯಲ್ಲಿ ಕಳುಹಿಸಲ್ಪಡತಕ್ಕದ್ದು, ಮತ್ತು "ಸ್ಟೇಷನರೀ ಸಾಮಾನಿಗಾಗಿ ದರಖಾಸ್ತು" ಯೆಂಬದಾಗಿ ವಿಳಾಸ ಬರೆಯಲ್ಪಟ್ಟು ದರಖಾಸ್ತಿನ ಮೊಬಲಗಿನ ಮೇಲೆ ಶೇಕಡಾ 5ರ ಪ್ರಕಾರ ಆಗುವ ತೇವಣೀ ಮೊಬಲಗ್ ಸಹಿತವಾಗಿ ಕಳುಹಿಸಲ್ಪಡತಕ್ಕದ್ದು.

3. ತೇವಣೀ ಮೊಬಲಗು ರಾಜಧಾನಿ ಬ್ಯಾಂಕಿನ ರೀತಿ ಮೂಲಕವಾಗಿರತಕ್ಕದ್ದು; ನಗದ್ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

4. ದರಖಾಸ್ತಿನಲ್ಲಿ ಹೇಂದುಕಾಗೆ ಕಮ್ಮಿಯಾದ ಭಾಗವನ್ನು ಅಂಗೀಕರಿಸುವದಿಲ್ಲ, ಮತ್ತು ಅದರಲ್ಲಿನ ಯಾವದಾದರೂ ಚಿತ್ತು ವ ಬದಲಾವಣೆಗಳು, ದರಖಾಸ್ತುದಾರನ ರುಜುವಿನಿಂದ ದೃಢಪಡಿಸಲ್ಪಟ್ಟು ಹೊರತು, ಅಂಗೀಕರಿಸಲ್ಪಡಲಾರವು.

5. ಸರಬರಾಯಿ ಮಾಡಲ್ಪಡುವ ಕಾಗದ್ದ ವಾದ್ರಿಗಳು ದರಖಾಸ್ತಿನ ಸಂಗಡ ಕಳುಹಿಸಲ್ಪಡತಕ್ಕದ್ದು, ಅಂಥಾ ವಾದ್ರೀಕಾಗ ದ್ದವೇಲೆ ದರಖಾಸ್ತುದಾರನ ಹೆಸರು ಮತ್ತು ಪಟ್ಟಿಕೊಳ್ಳುವ ದರ ಸುದಾ ಸ್ಪಷ್ಟವಾಗಿ ನಮೂದಿಸಲ್ಪಡಬೇಕು.

6. ದರಖಾಸ್ತುಗಳು, ಮೈಸೂರು ದಿವಾನ್ ರವರ ಚೀಫ್ ಸೆಕ್ರಟೆರಿಯವರಿಂದಲಾಗಲಿ ಅವರ ಸೈರ್ ಹಾಜರಿಯಲ್ಲಿ ಅಂಡರ್ ಸೆಕ್ರಟೆರಿಯವರಿಂದಲಾಗಲಿ, 1891ನೇ ಇಸವಿ ಜನವರಿ 19ನೇ ಮಧ್ಯಾನ್ಹ 2 ಘಂಟೆಗೆ ಬೆಂಗಳೂರು ಮೊಕ್ಕಾಮಿನಲ್ಲಿರತಕ್ಕ ಅವರ ಆಫಿಸಿನಲ್ಲಿ ಹಾಜರಾಗುವದಕ್ಕೆ ಯಿಷ್ಟವುಳ್ಳ ಜನಗಳ ರೂಬರೂ ಖುಲ್ಲಾ ಮಾಡಲ್ಪಡುವವು.

7. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು, ಆತನ ದರಖಾಸ್ತು ಯಾವ ಪದಾರ್ಥಕ್ಕೆ ಅಂಗೀಕರಿಸಲ್ಪಟ್ಟಿತೋ ಅಂಥಾ ಪದಾ ರ್ಥದ ಕ್ರಯದ ಮೊಬಲಗಿನ ಮೇಲೆ ಶೇಕಡಾ 10ರ ಪ್ರಕಾರ ಆಗುವ ಮೊಬಲಗನ್ನು ಜಾಮೀನೀ ತರೀಕ್ ಯಿಡುವದಕ್ಕೂ ಆತನ ದರ ಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ದರಖಾಸ್ತುದಾರನಿಗೆ ಈ ಆಫಿಸಿನಿಂದ ತಿಳಿಸಲ್ಪಟ್ಟ 15 ದಿವಸಗಳ ವಳಗಾಗಿ (ಆಫಿಸಿನಲ್ಲಿ ತೋರಿ ಸಲ್ಪಡುವ ವಂದು ನಮೂನೆಯಲ್ಲಿ) ವಂದು ಮುಚ್ಚಳಿಕೆಗೆ ರುಜು ಮಾಡುವದಕ್ಕೂ ಬದ್ಧನಾಗಿರತಕ್ಕದ್ದು. ತಪ್ಪಿದರೆ ದರಖಾಸ್ತಿನೊಂ ದಿಗೆ ಹಾಜರ್ಮಾಡಲ್ಪಟ್ಟ ಶೇಕಡಾ 5ರಂತೆ ಆಗುವ ಮೊಬಲಗು ದಂಡವಾಗಿ ಸರಕಾರಕ್ಕೆ ತೆಗದುಕೊಳ್ಳಲ್ಪಡುವದಲ್ಲದೆ ಸದರೀಯವನ ದರ ಖಾಸ್ತು ರದ್ದಾದಂತೆ ಭಾವಿಸಲ್ಪಡುವದು.

8. ಕಂಟ್ರಾಕ್ಟು ಮುಚ್ಚಳಿಕೆಗೆ ಅವಶ್ಯಕವಾದ ಸ್ಟ್ಯಾಂಪು ಹಾಸಲೆ ಸುದಾ ಕಂಟ್ರಾಕ್ಟುದಾರನಿಂದಲೇ ಪಾವತೀ ಮಾಡಲ್ಪಡ ಬೇಕು.

9. ಪದಾರ್ಥಗಳು ಬೇಲ್‌ಗಳಾಗಿಯಾಗಲಿ ಮೂಟೆಗಳಾಗಿಯಾಗಲಿ ಪಟ್ಟಿಸಲ್ಪಡುವದಾದರೆ ಅವುಗಳಿಗೆ ನೀರಿನಿಂದಲೂ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವದರಿಂದಲೂ ನಷ್ಟ ಸಂಭವಿಸದಂತೆ ಅವುಗಳುಭದ್ರವಾಗಿ ಪ್ಯಾಕ್ ಮಾಡಲ್ಪಡಬೇಕು.

10. ವಪ್ಪಿಕೊಳ್ಳುವ ದರಗಳಲ್ಲಿ ಬೆಂಗಳೂರಲ್ಲಿ ತಂದು ವಪ್ಪಿಸುವ ಲಾಗವಡು ಅಡಗಿರತಕ್ಕದ್ದು, ಮತ್ತು ಪದಾರ್ಥಗಳು ಬೆಂಗಳೂರಲ್ಲಿರುವ ಸ್ಟೇಷನರೀ ಡಿಪೋದಲ್ಲಿ 1891ನೇ ಇಸವಿ ಮಾರ್ಚಿ 10ನೇ ತಾರೀಖು ಯಾ ತತ್ಪೂರ್ವದಲ್ಲಿ ಒಪ್ಪಿಸಲ್ಪಡತಕ್ಕದ್ದು.

11. ಅಂಗೀಕರಿಸಲ್ಪಡದ ದರಖಾಸ್ತುದಾರರ ಠೇವಣೀ ಮೊಬಲಗು ಅವರ ದರಖಾಸ್ತು ಯಿತ್ಯರ್ಥವಾದ ಕೂಡಲೇ ಇತರರ ಠೇವಣಿ ಮೊಬಲಗು ಕಂಟ್ರಾಕ್ಟು ಮುಗಿದ ತರುವಾಯವೂ ವಾಪಸ್ ಮಾಡಲ್ಪಡುವದು.

12. ಇದರಡಿ ರುಜುಮಾಡಿರುವವರು ಯಾವ ದರಖಾಸ್ತನ್ನಾಗಲಿ ಸಬಬ್ ನಮೂದಿಸದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ತಾರೀಖು 12ನೇ ಡಿಸಂಬರ್ 1890.

ನಂ. 328.—ಮೆಸ್ಟರ್ ಎ. ಗೋಪಾಲಯ್ಯಂಗಾರ್ರು, 1890ನೇ ಇಸವಿ ನವಂಬರ್ 15ನೇ ಮಾರ್ಕ್ಕಂ ಪೂರ್ವಾನ್ವದಲ್ಲಿ ಫೈಬ್ ರಾಕ್ಸ್ ಸಬ್ ಡಿವಿಜ್ ಪೊಲೀಸ್ ಆಫೀಸಿನ ಚಾರ್ಜನ್ನು ಮೆಸ್ಟರ್ ಜೆ. ಜೆ. ನಾರ್ಥ್ಯಯವರಿಗೆ ವೊಪ್ಪಿಸಿರುತ್ತಾರೆ.

ನಂ. 329.—ಗುಬ್ಬಿ ತಾಲ್ಲೂಕು ಅಮಲ್ದಾರ್ ಕಂಠೀರವಾಚಾರ್ರು ಅವರಿಗೆ, 1890ನೇ ಇಸವಿ ಸೆಪ್ಟಂಬರ್ 13ನೇ ಮಾರ್ಕ್ಕಂ 261ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ವೊಂದು ತಿಂಗಳ ಪ್ರಿವಿಲೀಜ್ ರಜಾವನ್ನು 1890ನೇ ಇಸವಿ ನವಂಬರ್ 22ನೇ ಮಾರ್ಕ್ಕಂ ಪೂರ್ವಾನ್ಹದ ಲಾಗಾಯತು ಉಪಯೋಗಿಸಿಕೊಂಡು ಸದರೀ ತಿಂಗಳು 29ನೇ ಮಾರ್ಕ್ಕಂ ಮಧ್ಯಾನ್ಹಾತ್ಪರ ಕೆಲಸದಮೇಲೆ ವಾಪಸ್ ಬಂದಿರುತ್ತಾರಾಗಿ, ಅವರಿಂದ ಉಪಯೋಗಿಸಿಕೊಳ್ಳಲ್ಪಡದ ಭಾಗವಂದರೆ 22 ದಿವಸಗಳ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 16ನೇ ಡಿಸಂಬರ್ 1890.

ನಂ. 331—ಈ ಕೆಳಗೆ ಬರುವ ವರ್ಗಾವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತವೆ:—

ಶಿವಮೊಗ್ಗಾ ಮುನ್ಸೀಫರಾದ ಮೆಸ್ಟರ್ ಎ. ತಿರುನಾರಣಾಚಾರ್ ಬಿ. ಎ., ಬಿ. ಎಲ್. ಯವರು ಎಡಹಳ್ಳಿಗೆ ಕೂಡ್ಲೇ ಹೋಗಿ ಕೇರ ತಕ್ಕದ್ದು.

ಎಡಹಳ್ಳಿ ಮುನ್ಸಿಫರಾದ ಮೆಸ್ಟರ್ ಸಿ. ರಾಮರಾಯರು ಶಿವಮೊಗ್ಗಾ ಕ್ಕೆ ಕೆಲಸದ ಚಾರ್ಜನ್ನು ಒಪ್ಪಿಸಿದ ಮೇಲೆ ಹೋಗಿಕೇರತಕ್ಕದ್ದು.

ಹುಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರೆಟರಿ.

ವಿದ್ಯಾಭ್ಯಾಸದ ಇಲಾಖೆ.

ತಾರೀಖು 9ನೇ ಡಿಸಂಬರ್ 1890ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀಯ ಪರೀಕ್ಷೆಯು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳದ ಸರ್ಕಾರೀ ಕಾಲೇಜ್ ಅಥವಾ ಹೈ ಸ್ಕೂಲಿನಲ್ಲಿ ನಡಿಸಲ್ಪಡುವದು. ಸದರೀ ಪರೀಕ್ಷೆಯು ಸ್ರ 1891ನೇ ಇಸವಿ ಫಿಬ್ರವರಿ ತಿಂಗಳ 16ನೇ ಸೋಮವಾರದ ದಿವಸ ಆರಂಭಿಸುತ್ತದೆ. ಪರೀಕ್ಷೆಯು ಇದರಡಿಕಂಡ ಕಾಲಕ್ರಮವಾಗಿ ನಡೆಸಲ್ಪಡುವದು.

ದಿವಸ.	ವಿದ್ಯಾರ್ಥಿಗಳ ಪರೀಕ್ಷೆ.		ಉಪಾಧ್ಯಾಯರ ಪರೀಕ್ಷೆ.	
	ಘಂಟೆ.	ಅಂಶಗಳು.	ಘಂಟೆ.	ಅಂಶಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ.	ಭಾಷಾ ಗ್ರಂಥ ಮತ್ತು ವ್ಯಾಕರಣ (ಆವಶ್ಯಕ ಭಾಷೆ)	10ರಿಂದ 1ರವರಿಗೆ	ಪದ್ಯಕಾವ್ಯ ವಾಕ್ಯವಿಭಜನೆ.
	2 „ 5 „	ಡಿಟೋ ಡಿಟೋ (ಎರಡನೇ ಭಾಷೆ)	2 „ 4 „	ವ್ಯಾಕರಣ.
			4 „ 5 „	ವಾಕ್ಯರಚನೆ.
ಎರಡನೇ ದಿವಸ.	10ರಿಂದ 12ರ ವರಿಗೆ	ಹಿಂದೂ ಚರಿತೆ)	10ರಿಂದ 1ರವರಿಗೆ	ಹಿಂದೂಚರಿತೆ).
	12 „ 12·30 „	ಉಕ್ತ ಲೇಖನ (ಆವಶ್ಯಕಭಾಷೆ)		
	2·30 „ 1 „	ಬರವಣಿಗೆ (ಡಿಟೋ)	2 „ 4 „	ರೇಖಾಗಣಿತ.
	2 „ 5 „	ಭೂಗೋಳ,ಭೂಪಟ ನಕ್ಷೆಬರಿಯುವಿಕೆ.		